| ವರ್ಷ | ರಫ್ತಾದ ಸರಕಿನ ಪ್ರಮಾಣ | ರಫ್ತಾದ ಸರಕಿನ ಮೌಲ್ಯ (ರೂ) |
|---|---|---|
| 2001–02 | 1,38,986M T | 15,26 66 066 |
| 2002–03 | 1,02,905M T | 47,76,74,136 |

**ಕಾರವಾರ ಬಂದರು (ಹಡಗುಗಳ ಮುಖಾಂತರ)**

| | | |
|---|---|---|
| 2001–02 | 3 00,689M T | 187,96,13,513 |
| 2002–03 | 2 80,573M T | 1,47,16,29,580 |

ಆ) ಕಾರವಾರ ಬಂದರು

| ವರ್ಷ | ರಫ್ತಾದ ಸರಕಿನ ಪ್ರಮಾಣ | ಆಮದಾದ ಸರಕಿನ ಮೌಲ್ಯ (ರೂ) |
|---|---|---|
| 2001–02 | 1 72 069M T | 115,76,32,380 |
| 2002–03 | 1,81,611M T | 136 23,13,950 |

ಮಂಗಳೂರು ಬಂದರು

ಹಳೇ ಮಂಗಳೂರು ಬಂದರಿಗೆ ಹೊರ ದೇಶದಿಂದ ಯಾವುದೇ ಹಡಗುಗಳು ಬಂದಿರುವುದಿಲ್ಲ

ಇ) ಹೌದು

ಇಲ್ಲ

ಉದ್ಭವಿಸುವುದಿಲ್ಲ

ಈ) ಇಲ್ಲ

ಉದ್ಭವಿಸುವುದಿಲ್ಲ

ಉ) ಕಾರವಾರ ಬಂದರಿನಿಂದ 2001–02 ರ ಸಾಲಿನಲ್ಲಿ 2,206 ಮೀನನ್ನು ರಫ್ತು ಮಾಡಲಾಗಿದೆ ಇದರಿಂದ ಬಂದರು ಇಲಾಖೆಗೆ ರೂ 6 47,329 ಆದಾಯ ಬಂದಿರುತ್ತದೆ

ರೂ 6,47,329 ಆದಾಯ ಬಂದಿರುತ್ತದೆ

ಹಳೇ ಮಂಗಳೂರು ಬಂದರಿನಿಂದ ಮೀನನ್ನು ರಫ್ತು ಮಾಡಲಾಗಿರುವುದಿಲ್ಲ

**ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮಣಿಕೆ ಕೈಗಾರಿಕೆ**

229 (571) ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 2 ವರ್ಷದಿಂದ ಚಾಮರಾಜನಗರ ಜಿಲ್ಲೆಯಲ್ಲಿ ಅಕ್ರಮವಾಗಿ ಎಷ್ಟು ಗಣಿ ಕೈಗಾರಿಕೆಗಳನ್ನು ಪ್ರಾರಂಭಿಸಿದ್ದಾರೆ ಅವರ ಮೇಲೆ ಯಾವ ರೀತಿಯ ಕ್ರಮ ಜರುಗಿಸಿದ್ದೀರಿ

ಆ) ಖಾಸಗಿ ಭೂಮಿಯಲ್ಲಿ ಎಷ್ಟು ಗಣಿ ಕೈಗಾರಿಕೆಗಳು ಪ್ರಾರಂಭವಾಗಿವೆ, ಅವು ಯಾವುವು

ಇ) ಅಕ್ರಮವಾಗಿ ಗಣಿ ಕೈಗಾರಿಕೆಗಳು ನಡೆಯುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಆದಾಯ ನಷ್ಟ ಉಂಟಾಗಿದೆ ಇದನ್ನು ತಪ್ಪಿಸಲು ಸರಕಾರವು ತೆಗೆದುಕೊಂಡಿರುವ ಕ್ರಮವೇನು

ಈ) ಸರ್ಕಾರವು ಹೊಸದಾಗಿ ಗಣಿ ಕೈಗಾರಿಕೆಗಳನ್ನು ತೆರೆಯಲು ಅನುಮತಿ ನೀಡಲು ಕ್ರಮ ಕೈಗೊಂಡಿದೆಯೇ ಹಾಗಿದ್ದ ಪಕ್ಷದಲ್ಲಿ ಯಾವ ರೀತಿಯ ಕ್ರಮ ಕೈಗೊಂಡಿದ್ದೀರಿ

ಉ) ಕಳೆದ ಎರಡು ವರ್ಷಗಳಿಂದ ಗಣಿ ಕೈಗಾರಿಕೆಗಳಿಂದ ಬಂದಿರುವ ಆದಾಯವೆಷ್ಟು ನಷ್ಟವಾಗಿದ್ದ ಪಕ್ಷದಲ್ಲಿ ನಷ್ಟವೆಷ್ಟು?

ಶ್ರೀ ಎ ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ ನಾಲ್ಕು ಅನಧಿಕೃತ ಗಣಿಗಾರಿಕೆಯನ್ನು ಪತ್ತೆ ಹಚ್ಚಿದ್ದು, ಈ ಪೈಕಿ 1 ಗ್ರಾನೈಟ್ ಗಣಿಗಾರಿಕೆ ಮತ್ತು 3 ಮರಳು ನಿಕ್ಷೇಪಕ್ಕೆ ಸಂಬಂಧಿಸಿದೆ ಅನಧಿಕೃತವಾಗಿ ತೆಗೆಯಲಾದ ಗ್ರಾನೈಟ್ ಶಿಲಾ ದಿಮ್ಮಿಗಳನ್ನು ವಶಪಡಿಸಿಕೊಂಡು ಕಾನೂನಿನ ರೀತಿ ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದೆ ಹಾಗೂ ಅನಧಿಕೃತ ಗಣಿಗಾರಿಕೆಗೆ ಬಳಸಲಾದ ಮರಳು ನಿಕ್ಷೇಪವನ್ನು ಹರಾಜು ಮಾಡಲಾಗಿದೆ

ಆ) ಖಾಸಗಿ ಭೂಮಿಯಲ್ಲಿ 63 ಗಣಿ ಕೈಗಾರಿಕೆಗಳು ಪ್ರಾರಂಭವಾಗಿದ್ದು ವಿವರ ಈ ಕೆಳಗಿನಂತಿದೆ –

| | |
|---|---|
| ಕಪ್ಪು ಗ್ರಾನೈಟ್ | –54 |
| ಕಟ್ಟಡದ ಕಲ್ಲು | –06 |
| ಸಾಮಾನ್ಯ ಮರಳು | –02 |
| ಸುಣ್ಣದ ಕಲ್ಲು | –01 |

ಇ) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕಂದಾಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅನಧಿಕೃತ ಗಣಿಗಾರಿಕೆಯನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಿದೆ ಹಾಗೂ ಅನಧಿಕೃತ ಗಣಿಗಾರಿಕೆಯಿಂದ ತೆಗೆದಿದ್ದ ಶಿಲಾ ದಿಮ್ಮಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮಾಡಲಾಗಿದೆ ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಎಲ್ಲಾ ಕ್ರಮ ಕೈಗೊಂಡು ಅದನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿದೆಯಾದ್ದರಿಂದ, ಸರ್ಕಾರದ ಬೊಕ್ಕಸಕ್ಕೆ ಆದಾಯ ಹೆಚ್ಚಾಗಿದ್ದು, ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಹೌದು

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ, 1994 ರ ಅನುಸಾರ ಗಣಿಗಾರಿಕೆಗೆ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ

ಉ) 2001–02ನೇ ಸಾಲಿನಲ್ಲಿ ರೂ 3,28,82,911 ಹಾಗೂ 2002–03ನೇ ಸಾಲಿನಲ್ಲಿ ರೂ 4,13,93,483 ರಾಜಧನ ವಸೂಲಾಗಿದ್ದು, ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ

## ರಾಜ್ಯದಲ್ಲಿ ರೇಷ್ಮೆ ಮಾರಾಟ

231 (573) ಶ್ರೀ ಎ ಎಸ್ ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ರೇಷ್ಮೆ, ಜವಳಿ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಿಂದ ಕರ್ನಾಟಕ ರೇಷ್ಮೆ ವಿನಿಮಯದಲ್ಲಿ ಯಾವ ಪ್ರಮಾಣದಲ್ಲಿ ವ್ಯವಹಾರವು ನಡೆದಿರುತ್ತದೆ